3. ಮಂಜುನಾಥಪುರದ ಹತ್ತಿರ - 1 ಸಂಖ್ಯೆ 5 ಹೆಚ್.ಪಿ

4. ಮಂಡಿಮೊಹಲ್ಲಾ ಪ್ರದೇಶದ ಹತ್ತಿರ - 1 ಸಂಖ್ಯೆ 5 ಹೆಚ್.ಪಿ

5. ದೊಡ್ಡ ಒಕ್ಕಲಿಗರ ಕೇರಿ - 1 ಸಂಖ್ಯೆ 5 ಹೆಚ್.ಪಿ

1997-98ರಲ್ಲಿ ಕೊಳವೆ ಬಾವಿಗಳನ್ನು ಕರ್ನಾಟಕ ಜಲ ಮಂಡಲಿಯಿಂದ ಕೊರೆದಿರುವುದಿಲ್ಲ.

ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದು.

107 (190)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ ಕ್ಷೇತ್ರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ರೋಗಗ್ರಸ್ಥವೆಂದು ಗುರುತಿಸಿದೆ ಅವುಗಳು ಯಾವುವು?

ಆ) ಸದರಿ ಕೈಗಾರಿಕೆಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಸರ್ಕಾರ ಮನ್ನಾ ಮಾಡಿದೆಯೇ?

ಇ) ಮನ್ನಾ ಮಾಡಿದ್ದರೆ ಅದರ ಒಟ್ಟು ಮೊತ್ತವೆಷ್ಟು?

ಈ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):

ಅ) 5837 ಭಾರತೀಯ ರಿಜರ್ವ್ ಬ್ಯಾಂಕ್‌ನ ವರದಿಯ ಪ್ರಕಾರ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಈ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದ್ದು, ಕೆಳಕಂಡ ಸಹಾಯ ಸೌಲಭ್ಯಗಳನ್ನು ಒದಗಿಸಿ ಹೊಸ ಸರ್ಕಾರಿ ಆದೇಶವನ್ನು ದಿನಾಂಕ: 26-12-96ರಂದು ಹೊರಡಿಸಲಾಗಿದೆ.

1) ಮಾರ್ಜಿನ್ ಹಣದ ಸಹಾಯ

2) ಮಾರಾಟ ತೆರಿಗೆ ವಿನಾಯಿತಿ

3) ಕೆ.ಇ.ಬಿ.ಯಿಂದ ವಿದ್ಯುತ್ ರಿಯಾಯಿತಿಗಳು.

4) ಕೆಐಎಡಿಬಿ: ಕೆಎಸ್ಎಸ್ಐಡಿಸಿ, ಕಿಯೋನಿಕ್ಸ್ ಸಂಸ್ಥೆಗಳಿಗೆ ನೀಡಬೇಕಾಗಿರುವ ಸುಸ್ತಿ ಬಾಕಿ ಮರು ಹೊಂದಾಣಿಕೆ.

5) ಅಭಿವೃದ್ಧಿ ಸಾಲದ ಮರು ಹೊಂದಾಣಿಕೆ.

6) ರೋಗಗ್ರಸ್ಥ ಘಟಕಗಳಿಗೆ ಕಾರ್ಮಿಕ ವಿವಾದಗಳನ್ನು ಬಗೆಹರಿಸಲು ಕಾರ್ಮಿಕ ಇಲಾಖೆಯ ಮೂಲಕ ನೆರವು.

ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ

108 (191)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದವರಿಗಿದೆಯೇ?

ಆ) ರೈತರು ಬೆಳೆದ ಕಚ್ಚಾ ವಸ್ತುಗಳನ್ನು ಕನಿಷ್ಟ ಸಿದ್ಧವಸ್ತುಗಳನ್ನಾಗಿ ತಯಾರಿಸಲು ಕೈಗಾರಿಕೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):

ಅ) ಸರ್ಕಾರವು ಸಣ್ಣ ಕೈಗಾರಕೆಗಳನ್ನು ಸ್ಥಾಪಿಸುವುದಿಲ್ಲ. ಉದ್ಯಮಿಗಳು ಮುಂದೆ ಬಂದು ಸ್ಥಾಪಿಸಿದ್ದೇ ಆದಲ್ಲಿ ಕೈಗಾರಿಕೆ ನೀತಿ ಅನ್ವಯ ಅನೇಕ ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡುತ್ತದೆ.

ಆ) ಉದ್ಭವಿಸುವುದಿಲ್ಲ

ಎ.ಡಿ.ಬಿ. ನಿಧಿಯಿಂದ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.

109 (193)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?